ವಾಣಿಜ್ಯ ಇಲಾಖೆಗಳ ಮೂಲಕ ಗಿರಿಜನ ಉಪಯೋಜನೆಯಡಿ ಸವಲತ್ತುಗಳ ವಿತರಣೆ.

7) ಕರ್ನಾಟಕ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಸಾಮೂಹಿಕ ನೀರಾವರಿ, ವೈಯಕ್ತಿಕ ನೀರಾವರಿ, ಭೂ ಒಡೆತನ ಯೋಜನೆ, ಸ್ವಯಂ ಉದ್ಯೋಗ ಯೋಜನೆಗಳ ಅನುಷ್ಠಾನ.

8) ಕೊರಗ ಕಾಲೋನಿಗಳ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ರಸ್ತೆ ಸಂಪರ್ಕ, ಚರಂಡಿ ನಿರ್ಮಾಣ, ವಿದ್ಯುಚ್ಛಕ್ತಿ, ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗುವುದು.

9) ವೃತ್ತಿಪರ ತರಬೇತಿ ಕಾರ್ಯಕ್ರಮದಡಿಯಲ್ಲಿ ತರಬೇತಿ.

10) ಸ್ವಯಂ ಸೇವಾ ಸಂಸ್ಥೆಗಳ ವತಿಯಿಂದ ನಡೆಸಲಾಗುತ್ತಿರುವ ಶಿಕ್ಷಣ ಕೇಂದ್ರಗಳಿಗೆ ಸಹಾಯಧನ.

ಆ) ಹೌದು. ಕೊರಗ ಕೃಷಿಕಾರ್ಮಿಕರಿಗೆ ಭೂ ಒಡೆತನ ಯೋಜನೆಯಡಿ ಜಮೀನು ಖರೀದಿಸಲು ಸಾಲ ಸೌಲಭ್ಯ, ನೀರಾವರಿಗೆ ಸಹಾಯಧನ ನೀಡುವುದು, ಸ್ವಯಂ ಉದ್ಯೋಗ ಯೋಜನೆಯಡಿ, ಡೈರಿ, ಪೌಸಾಯಿಕ್ ಪಾಲಿಷ್, ಹಂದಿ ಸಾಕಾಣಿಕೆ, ವಸತಿ ಕಾರ್ಯಾಗಾರ ರಸ್ತೆಬದಿಯಲ್ಲಿ ಅಂಗಡಿ ನಿರ್ಮಾಣ ಎಸ್‌ಟಿಡಿ ಬೂತ್, ಆಟೋರಿಕ್ಷಾ ಮಲ್ಲಿಗೆ ಕೃಷಿಗೆ ಸಹಾಯಧನ ವಾಹನ ಚಾಲನೆಯಲ್ಲಿ ತರಬೇತಿ, ಕಂಪ್ಯೂಟರ್ ತರಬೇತಿ, ಪ್ಲಂಬಿಂಗ್, ಗಾರೆ ಕೆಲಸ ಇತ್ಯಾದಿ ವೃತ್ತಿಗಳಲ್ಲಿ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಕೊರಗ ಜನಾಂಗದವರ ಅಭಿವೃದ್ಧಿಗೆ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಹೌದು. ಪರಿಶೀಲನೆಯಲ್ಲಿದೆ.

ದಕ್ಷಿಣ ಕನ್ನಡ :, ಉಡುಪಿ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು.

1946(1917)

ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಯಾವುವು? (ವಿವರ ನೀಡುವುದು).

ಆ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ಅವುಗಳಿಗೆ ಬಿಡುಗಡೆ ಮಾಡಲಾಗಿರುವ ಹಣದ ಮೊತ್ತ ಎಷ್ಟು; ಕೇಂದ್ರ ಸರ್ಕಾರದ ನೆರವನ್ನು ಸದರಿ ಸಂಸ್ಥೆಗಳು ಪಡೆದಿದ್ದಲ್ಲಿ ಅದರ ಒಟ್ಟು ಮೊತ್ತ ಎಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) 1. ಸ್ಫೂರ್ತಿ ಅನೌಪಚಾರಿಕಾ ಶಿಕ್ಷಣ ಕೇಂದ್ರ, ಕೋಟೇಶ್ವರ ಕುಂದಾಪುರ ತಾಲ್ಲೂಕು.

2. ಆಶಿಕಾ ಸಂಸ್ಥೆ ಕೋಟೇಶ್ವರ, ಕುಂದಾಪುರ ತಾ:

3. ಯುನೆಸ್ಕೋ, ಬೈಂದೂರು ಕುಂದಾಪುರ ತಾ:

4. ಸಮಗ್ರ ಗ್ರಾಮೀಣ ಆಶ್ರಮ, ಕಾಪು ಉಡುಪಿ ತಾ:

5. ಶ್ರೀ ಭುಜಬಲ ಬ್ರಹ್ಮಚರ್ಯ ಮತೀಯ ಅಲ್ಪಸಂಖ್ಯಾತರ ಸಂಘ, ಕಾರ್ಕಳ.

ಆ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ಒಟ್ಟು ರೂ.3.08 ಲಕ್ಷಗಳನ್ನು ಹಾಗೂ ಕೇಂದ್ರ ಸರ್ಕಾರದ ನೆರವು ಒಟ್ಟು ರೂ.5.47 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಮಂಗಳೂರು ಮತ್ತು ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದವರು 2000-2001ರಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳು.

1947(2053)

ಶ್ರೀ ಜಯಪ್ರಕಾಶ್ ಹೆಗ್ಡೆ(ಬ್ರಹ್ಮಾವರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಹಾಗೂ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದವರು 2000-2001ನೇ ಸಾಲಿನಲ್ಲಿ ಕೈಗತ್ತಿಕೊಂಡಿರುವ ಕಾರ್ಯಕ್ರಮಗಳು ಹಾಗೂ ಅವುಗಳ